ಮಂಗಳವಾರ,5 ಸೆಪ್ಟೆಂಬರ್ 2017 | ಪುಟಗಳು: 16+4(MNG+4) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 40
VK ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
ಶಿಕ್ಷಕರ ದಿನಾಚರಣೆ ಶುಭಾಶಯ



ಮೂರು ವರ್ಷದ ಬಳಿಕ ಗೋಪಿಚಂದ್ ಗರಡಿಗೆ ಮರಳಿದ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ P15



ನೋಟ್ ಬ್ಯಾನ್‌ನಿಂದ ಎಷ್ಟು ಕಾಳಧನ ನಿವಾರಣೆಯಾಗಿದೆ ಎಂಬ ಮಾಹಿತಿ ಇಲ್ಲ: ಸಂಸದೀಯ ಸಮಿತಿಗೆ ಆರ್‌ಬಿಐ ಹೇಳಿಕೆ P13

ನೂತನ ಸಚಿವ ಆಲ್ಫೋನ್ಸ್ ಕಣ್ಣಂತಾನಂಗೆ ಪರಿಸರ ಸಚಿವ ಮಹೇಶ್ ಶರ್ಮ ಸ್ವಾಗತ

# ಮೆಕಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಹಾಟ್ ಫೇವರಿಟ್

**ಮುಂಬಯಿ:** ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಹೆಚ್ಚುತ್ತಿರುವ ಉದ್ಯೋಗ ಅನಿಶ್ಚಿತತೆಯು ಎಂಜಿನಿಯರಿಂಗ್ ಕಾಲೇಜು, ಕೋರ್ಸ್‌ಗಳ ಮೇಲೆ ಪರಿಣಾಮ ಬೀರುತ್ತಿದೆ.

ಒಂದೆಡೆ, ದೇಶಾದ್ಯಂತ ವೃತ್ತಿಪರ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆಯೇ ಕಡಿಮೆಯಾಗುತ್ತಿದ್ದರೆ, (2013-14ರಲ್ಲಿ 16.3 ಲಕ್ಷದಿಂದ 2017ರಲ್ಲಿ 14.7 ಲಕ್ಷಕ್ಕೆ ಇಳಿಮುಖ) ಮತ್ತೊಂದೆಡೆ ಮೆಕಾನಿಕಲ್ ಎಂಜಿನಿಯರಿಂಗ್, ವಿದ್ಯಾರ್ಥಿಗಳ ಪ್ರಥಮ ಆದ್ಯತೆಯಾಗಿ ಮಾರ್ಪಟ್ಟಿದೆ. ಐಟಿ ವಲಯದಲ್ಲಿ ಅನಿಶ್ಚಿತತೆ ಹೆಚ್ಚಿದ ಬಳಿಕ ವಿದ್ಯಾರ್ಥಿಗಳು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಹಾಗೂ ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳಿಂದ ವಿಮುಖರಾಗುತ್ತಿದ್ದಾರೆ.

ಅಧಿಕ ಉದ್ಯೋಗಾವಕಾಶ ಮತ್ತು ಸಂಬಳದ ಜತೆಗೆ ಉತ್ತಮ ಪ್ರಗತಿದರ ಕಾಯ್ದುಕೊಂಡ ಕ್ಷೇತ್ರದಲ್ಲಿ ಕೆಲಸ ಗಿಟ್ಟಿಸಿಕೊಡುವ ಕ್ಷೇತ್ರಗಳತ್ತ ವಿದ್ಯಾರ್ಥಿಗಳು ದೃಷ್ಟಿ ನೆಟ್ಟಿದ್ದಾರೆ.

2013-14ರ ಅವಧಿಯಲ್ಲಿ ಸುಮಾರು ಶೇ. 26 ರಷ್ಟು ವಿದ್ಯಾರ್ಥಿಗಳು ಐಟಿ ಆಯ್ದುಕೊಂಡರೆ, ಪ್ರಸಕ್ತ ಸಾಲಿನಲ್ಲಿ ಈ ಪ್ರಮಾಣ ಶೇ. 24ಕ್ಕೆ ಇಳಿದಿದೆ.

ಇದೇ ವೇಳೆ ಮೆಕಾನಿಕಲ್ ಎಂಜಿನಿಯರಿಂಗ್ ಮುಂಚೂಣಿಯಲ್ಲಿದೆ. 4 ವರ್ಷದ ಹಿಂದೆ ಇದ್ದ ಶೇ.20.22ಕ್ಕೆ ಹೋಲಿಸಿದರೆ, ಈ ಬಾರಿ ಮೆಕಾನಿಕಲ್ ಎಂಜಿನಿಯರಿಂಗ್ ಆಯ್ದುಕೊಂಡ ವಿದ್ಯಾರ್ಥಿಗಳ ಸಂಖ್ಯೆ ಶೇ. 21.6ಕ್ಕೆ ಏರಿಕೆಯಾಗಿದೆ.

ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ಗೂ ಸಹ ಹೆಚ್ಚಿನ ಬೇಡಿಕೆ ಕಂಡುಬರುತ್ತಿದೆ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ದತ್ತಾಂಶದಿಂದ ತಿಳಿದುಬಂದಿದೆ.

''ಎಂಜಿನಿರಿಂಗ್ ಈಗ 'ಬಿ.ಎ', ಬಿ.ಕಾಂ., ಬಿ.ಎಸ್‌ಸಿ. ಮಾದರಿಯಲ್ಲಿ ಸಾಮಾನ್ಯ ಕೋರ್ಸ್ ಆಗಿದ್ದು, ಅದನ್ನು ಮುಗಿಸಿದ ಬಳಿಕ ವಿದ್ಯಾರ್ಥಿಗಳು ಬೇರೆ ಬೇರೆ ಕೋರ್ಸ್‌ಗಳ ಅಧ್ಯಯನ ಮಾಡುತ್ತಿದ್ದಾರೆ,'' ಎಂದು ಐಐಟಿ ಮದ್ರಾಸ್ ನಿರ್ದೇಶಕ ಭಾಸ್ಕರ್ ರಾಮಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

''ಐಟಿ ವಲಯದಲ್ಲಿ ಅನಿಶ್ಚಿತತೆಯಿಂದ ವಿದ್ಯಾರ್ಥಿಗಳು ಮೆಕಾನಿಕಲ್‌ಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಮೆಕಾನಿಕಲ್ ಎಂಜಿನಿಯರಿಂಗ್ ಮುಗಿಸಿದವರು ಐಟಿ ಕಂಪನಿಗೆ ಸೇರಲು ಸಾಧ್ಯವಿದೆ. ಆದರೆ, ಕಂಪ್ಯೂಟರ್ ಸೈನ್ಸ್ ಮುಗಿಸಿದವರು ಮೆಕಾನಿಕಲ್ ವೃತ್ತಿಗೆ ಸಂಬಂಧಿಸಿದ ಕಂಪನಿಗಳಿಗೆ ಸೇರಲು ಸಾಧ್ಯವಿಲ್ಲ,'' ಎನ್ನುತ್ತಾರೆ ರಾಮಮೂರ್ತಿ.